(ದಿನಾಂಕಃ 31.01.2026 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು)

**ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿ *2* ರಿಂದ *4* ಪರ ವಕೀಲರಾದ ಶ್ರೀ ಬಿ.ಎಸ್.ವಿ ರವರಿಂದ ಃ-**

20. ಈಗ ಹಳೆಯ ಹಂಚಿನ ಆಸ್ಪತ್ರೆ ಇರುವುದಿಲ್ಲ ಎಂದರೆ ಸರಿಯಲ್ಲ. ನಾವು ಇರುತ್ತಿದ್ದೆ ಎಂಬ ಸ್ಥಳವು ಈಗ ಹೊಸ ಆರ್.ಸಿ.ಸಿ ಕಟ್ಟಡ ಆಗಿರುತ್ತದೆ ಎಂದರೆ ಸರಿ. ಅದು ದಿನಾಂಕಃ 23.11.2019 ರಂದು ಉದ್ಘಾಟನೆ ಆಗಿರುತ್ತದೆ ಎಂದರೆ ಸರಿ. ಸದರಿ ಉದ್ಘಾಟನಾ ಆಮಂತ್ರಣ ಪತ್ರವನ್ನು ಸಾಕ್ಷಿ ನೋಡಿ ಗುರುತಿಸಿದ್ದರಿಂದ ಅದನ್ನು ನಿಡಿ6 ಎಂದು ಗುರುತಿಸಲಾಯಿತು.

21. ಈಗ ಆಸ್ಪತ್ರೆ ಚಾಲ್ತಿಯಲ್ಲಿ ಇರುತ್ತದೆ ಎಂದರೆ ಸರಿ. ಅದು ಸರ್ಕಾರದ ಹಣದಿಂದ ಕಟ್ಟಡ ಕಟ್ಟಿರುತಾರೆ ಎಂದರೆ ಸಾಕ್ಷಿಯು ಅದು ಸರಿಯಾಗಿ ಕಟ್ಟಡ ಕಟ್ಟಿರುವುದಿಲ್ಲ ನಮ್ಮ ಸಂಘದ ಜಮೀನನ್ನು ಒತ್ತುವರಿ ಮಾಡಿಕೊಂಡು ಕಟ್ಟಿರುತ್ತಾರೆ ಎಂದು ನುಡಿಯುತ್ತಾರೆ.

22. ನಿಪಿ18 ರಿಂದ ನಿಪಿ21 ರ ದಾಖಲೆಗಳು ನಾವು ಈ ದಾವೆಯನ್ನು ದಾಖಲಿಸಿದ ಪೂರ್ವದಲ್ಲಿ ಆದ ದಾಖಲೆಗಳಾಗಿರುತ್ತದೆ ಎಂದು ಸೂಚಿಸಿದರೆ ಸರಿ. ನಮ್ಮ ಸಂಘವು ದಾವಾ ಸ್ವತ್ತಿಯಲ್ಲಿ ಯಾವುತ್ತೂ ಇರುವುದಿಲ್ಲ ಎಂದರೆ ಸರಿಯಲ್ಲ.

**ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿ *1* ಪರ ವಕೀಲರಾದ ಶ್ರೀ ಎ.ಜಿ.ಪಿ ರವರಿಂದ ಃ-**

ಪ್ರತಿವಾದಿ 1 ರವರ ಪರ ವಕೀಲರು ಪ್ರತಿವಾದಿ 2 ರಿಂದ 5 ರವರು ಮಾಡಿರುವ ಪಾಟೀ ಸವಾಲನ್ನು ಯತಾವತ್ತಾಗಿ ಅಳವಡಿಸಿಕೊಳ್ಳಲು ಪ್ರಾರ್ಥಿಸಿದ್ದರಿಂದ ಯತಾವತ್ತಾಗಿ ಅಳವಡಿಸಿಕೊಳ್ಳಲಾಯಿತು.

**<u>ಮರು ವಿಚಾರಣೆಃ ಇರುವುದಿಲ್ಲ.</u>**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸ. ಎಂ. ಒ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಹೊಸನಗರ.